6

# ಯೇಸು: ಪರಲೋಕದಲ್ಲಿ ಜೀವಂತನಾಗಿರುವನು

## (ಸೌಲ/ಪೌಲನ ಸಾಕ್ಷಿ)

ಹನ್ನೊಂದು ಜನ ಅಪೊಸ್ತಲರನ್ನು ಅವರ "ಅಪನಂಬಿಕೆ ಮತ್ತು ಹೃದಯ ಕಠಿಣತೆಯ" ಕಾರಣದಿಂದ ಉತ್ಥಾನವಾದ ಕ್ರಿಸ್ತನು ವೈಯಕ್ತಿಕವಾಗಿ ಗದರಿಸಿದನು (ಮಾರ್ಕ 16:14), ಆದರೆ ಅವರು ತಕ್ಷಣದ ಬದಲಾವಣೆ ಮಾಡಿಕೊಂಡರು. ಯೇಸುವಿನ ಶವವು ನಡೆಯುವದನ್ನೂ ಮಾತಾಡುವದನ್ನೂ - ಬಹಳವಾಗಿ ಸಜೀವವಾಗಿರುವದನ್ನೂ - ನೋಡಿ ಬಲವಾಗಿ ದೃಢತೆಯುಳ್ಳವರಾದರು; ಅವರು ತಮ್ಮ ನೂತನ ನಂಬಿಕೆಗಾಗಿ ಹತಸಾಕ್ಷಿಗಳಾದರು.

"ದಿನ ತುಂಬದೆ ಹುಟ್ಟಿದವನು ಒಬ್ಬನು" ಇದ್ದಾನೆ (1 ಕೊರಿಂಥ 15:8), ಕ್ರಿಸ್ತನ ಹೆಸರನ್ನು ಧರಿಸಿ ಕೊಂಡವರನ್ನು ಮೊದಲು ಕ್ರೂರವಾಗಿ ಹಿಂಸಿಸುವನಾಗಿದ್ದನು, ಭಯಪಡಿಸುತ್ತ ಕೊಲೆ ಮಾಡುತ್ತಿದ್ದನು (ಅಪೊಸ್ತಲರ ಕೃತ್ಯಗಳು 8:1; 9:1, 2; 22:4, 5; 26:9-11). ಪುನರುತ್ಥಾನದ ನಂತರ ಯೇಸುವಿನ ನಲ್ವತ್ತು ದಿನಗಳ ಅವಧಿಯಲ್ಲಿ ಪೌಲನು ಆತನನ್ನು ನೋಡಲಿಲ್ಲ. ಆದರೆ ಶವವು ಜೀವಹೊಂದಿದೆ ಎಂಬ ವರದಿಯು ನಂಬಲಿಕ್ಕಾಗದಂಥದ್ದಾಗಿರುವಂತೆ ಅವನ ಕಥೆಯು ಇರುತ್ತದೆ. ಆಕಾಶದಲ್ಲಿ ಕುರುಡಾಗಿಸುವ ಬೆಳಕಿನಲ್ಲಿ ಯೇಸುವನ್ನು ನೋಡಿದೆನೆಂದೂ ಆತನು ಮಾತಾಡುವದನ್ನು ಕೇಳಿಸಿ ಕೊಂಡೆನೆಂದೂ ಅವನು ಹೇಳಿದನು (ಅಪೊಸ್ತಲರ ಕೃತ್ಯಗಳು 9:3-6; 22:6-11; 26:13-18).

ಪೌಲನು ನಿಜವಾಗಿಯೂ ಯೇಸುವನ್ನು ನೋಡಿದ್ದರೆ ಮತ್ತು ಆತನು ಮಾತಾಡಿದ್ದನ್ನು ಕೇಳಿಸಿಕೊಂಡಿದ್ದರೆ, ಯೇಸುವು ಸತ್ತು ಹೋಗಿರುವದಿಲ್ಲ: ಆತನು ಸಮಾಧಿಯಿಂದ ಎದ್ದು ಬಂದು ಪರಲೋಕಕ್ಕೆ ಹೋಗಿರುವನು. ಖಚಿತವಾದ ಪರಲೋಕದ ದರ್ಶನವು ದೃಢಪಡಿಸಲ್ಪಟ್ಟರೆ, ಆಗ ಅವಿಶ್ವಾಸಿಯಿಂದ ಬಂದ ಬಲವಾದ ಪುರಾವೆಯು ಯೇಸುವಿನ ಪುನರುತ್ಥಾನವನ್ನು ಬೆಂಬಲಿಸುತ್ತದೆ. ಶವವು ಪುನಃ ಜೀವಿಸುವ ವರದಿಯಂತೇ ಪರಲೋಕದ ದರ್ಶನವು ವಿಚಿತ್ರವಾದದ್ದೂ ಅಸಂಬದ್ಧವಾದದ್ದೂ ಎಂಬಂತೆ ತೋರುತ್ತದೆ. ಪೌಲನ ಹೇಳಿಕೆಗೆ ಯಾವುದೇ ಮೌಲ್ಯವಿದೆಯೇ?

**ಒಂದು ಭ್ರಮೆ?**

ಪೌಲನು ಒಂದು ಭ್ರಮೆಯ hallucination ಬಲಿಪಶುವಾಗಿದ್ದನೋ? ಪೌಲನು ಎಂಥಾ ದೃಢವಾದ, ಬಲವುಳ್ಳ ಮನಸ್ಸಿನ ವ್ಯಕ್ತಿಯಾಗಿದ್ದನು ಎಂಬುದನ್ನು ಒಬ್ಬನು ಜ್ಞಾಪಿಸಿಕೊಳ್ಳುವವರೆಗೆ ಅದು ನೋಟಕ್ಕೆ ಚೆನ್ನಾಗಿರುವಂತೆ ಕಾಣುತ್ತದೆ. ಭ್ರಮೆಗಳು ಸಾಮಾನ್ಯವಾಗಿ ಸೂಚನೆಯಿಂದ ಪ್ರೇರೇಪಿಸಲ್ಪಡುತ್ತವೆಯೆಂದು ಮನಃ ಶಾಸ್ತ್ರಜ್ಞರು

ಹೇಳುವರು. ಹಾಗಿದ್ದರೂ ಈ ವಿಷಯದಲ್ಲಿ ಪೌಲನ ಮನಸ್ಸಿನಲ್ಲಿಯ ಯಾವುದೇ ಸೂಚನೆಯು ಯೇಸುವನ್ನು ನೋಡುವದಕ್ಕೆ ನೇರವಾಗಿ ವಿರುದ್ಧವಾದದ್ದಾಗಿತ್ತು. ಯೇಸುವಿನ ಹೆಸರನ್ನೇ ಅವನು ದ್ವೇಷಿಸಿದನು, ಆತನು ಒಬ್ಬ ಮೋಸಗಾರನೆಂದು ನಂಬಿದ್ದನು, ಯೇಸುವಿನ ಹೆಚ್ಚು ಜನ ಅನುಯಾಯಿಗಳನ್ನು ಬಂಧಿಸಿ, ಸೆರೆಮನೆಯಲ್ಲಿ ಹಾಕಿ ಅವರನ್ನು ಕೊಲ್ಲುವದಕ್ಕಾಗಿ ಅವನು ಪ್ರಯಾಣದಲ್ಲಿದ್ದನು. ಮಾನಸಿಕವಾಗಿ ಅವನು ಯೇಸುವನ್ನು ನೋಡಲು ಎಂದೂ ವಿಚಾರಿಸಿದವನಾಗಿರಲಿಲ್ಲ. ನಂಬುವಂತೇ ಮಾಡುವ ವಿಚಾರವು ಪೌಲನ ವಿಷಯದಲ್ಲಿ ಯಾವುದೇ ಅರ್ಥವುಳ್ಳದ್ದಾಗಿರಲಿಲ್ಲ.

**ಮಾನಸಿಕ ಬುದ್ಧಿವಿಕಲತೆ?**

ಮಾನಸಿಕ ಬುದ್ಧಿವಿಕಲತೆಯು ಇಲ್ಲವೇ ಸೂಚನೆಯ ಬಲವು ಪೌಲನ ದಮಸ್ಕದ ದಾರಿಯ ಅನುಭವವನ್ನು ವಿವರಿಸದಿದ್ದರೆ, ಅವನ ಕಲಿಯುವಿಕೆಯು ಅವನ ಮನಸ್ಸನ್ನು ಹಾಳುಮಾಡಿತ್ತೇ? ಇದು ಫೆಸ್ತನ ಗುರುತಿಸುವಿಕೆಯಾಗಿತ್ತು (ಅಪೊಸ್ತಲರ ಕೃತ್ಯಗಳು 26:24). ಸಮತೋಲನವಿಲ್ಲದ ಮನಸ್ಸಿನ ಮನುಷ್ಯನಿಗೆ ಹದಿಮೂರು ಇಲ್ಲವೇ ಹದಿನಾಲ್ಕು ಲೋಕದ ದೊಡ್ಡ ಪುಸ್ತಕಗಳನ್ನು ಬರೆಯಲು ಶಕ್ತಿಯಿದ್ದದ್ದು ಸಮತೋಲನವುಳ್ಳ ಮನಸ್ಸುಗಳಿಗೆ ಚೆನ್ನಾಗಿ ಮಾತಾಡುವದಿಲ್ಲ! ಯೇಸುವು ತಾನೇ ಸರಿಯಾದ ಜೀವನಕ್ಕೆ ಪ್ರೇರೇಪಿಸಿದ್ದಕ್ಕಿಂತಲೂ ಹೆಚ್ಚು ಜನರನ್ನು ನಡಿಸುವಂತೆ ಮಾಡಿದ ಮಾನಸಿಕ ಅಸ್ತವ್ಯಸ್ತತೆಯ ಬಗ್ಗೆ ಎಲ್ಲಿಯೂ ಕೇಳಲ್ಪಟ್ಟಿರುವದಿಲ್ಲ. ಫೆಸ್ತನು ಸರಿಯಾಗಿದ್ದರೆ, ನಮಗೆ ಇನ್ನೂ ಹೆಚ್ಚು ಬುದ್ಧಿಭ್ರಮಣೆ ಅಗತ್ಯವಾಗಿರುತ್ತದೆ. ಬಹಿರಂಗ ರಾಜಮಾರ್ಗದಲ್ಲಿ ಹಗಲಿನಲ್ಲಿಯ ದರ್ಶನಕ್ಕಾಗಿ ಸರಿಯಾದ ವಿವರಣೆಯು ಯಾವುದೇ ಇರಲಿ, ಅನಿಶ್ಚಿತವಾದ ಮನಸ್ಸು ಪೌಲನ ವಿಷಯದಲ್ಲಿ ಯೋಗ್ಯವಾದ ಆಯ್ಕೆಯಾಗಿರುವದಿಲ್ಲ.

**ಒಂದು ಕ್ರೈಸ್ತನ ಮೋಸ**

ಪೌಲನು ನೋಡಿದ್ದಕ್ಕೆ ಭ್ರಮೆ ಇಲ್ಲವೇ ಬುದ್ಧಿ ವಿಕಲ್ಪತೆಯು ಯೋಗ್ಯವಾದ ವಿವರಣೆ ಯಾಗದಿದ್ದರೆ, ಯಾವುದು ಯೋಗ್ಯವಾದದ್ದು? ಪೌಲನು ಕ್ರೈಸ್ತನಿಂದ ಸುಮ್ಮನೆ ಮೋಸ ಗೊಳಿಸಲ್ಪಟ್ಟನೆ? ಅಂಥ ಸೂಚನೆಯೂ ಸಹ ಕ್ರೈಸ್ತರಿಗೆ ವಿರುದ್ಧವಾದ ಆರೋಪವಾ ಗಿದೆ, ಯಾಕಂದರೆ ಅವರು ಮೋಸಗೊಳಿಸುವ ವ್ಯವಹಾರದಲ್ಲಿ ಇರುವದಿಲ್ಲ. ಸತ್ಯದ ವ್ಯಕ್ತೀಕರಣವಾಗಿದ್ದೇನೆಂದು ಹೇಳಿದಾತನನ್ನು ಹಿಂಬಾಲಿಸುವುದು ಅವರ ಗುರಿಯಾಗಿತ್ತು (ಯೋಹಾನ 14:6).

ಇದಲ್ಲದೇ, ಹಟಮಾರಿಯಾದ ಪೌಲನು ತನ್ನನ್ನು ಮೋಸದ ದಾರಿಗೆ ನಡಿಸಲು ಪ್ರಯತ್ನಿಸುವ ಕ್ರೈಸ್ತನಿಗೆ ಕಿವಿಕೊಡುವವನಾಗಿರಲಿಲ್ಲ. ಸ್ತೆಫನನಿಗೆ ಕಲ್ಲೆಸೆಯುತ್ತಿದ್ದವರ ಬಟ್ಟೆಗಳನ್ನು ಅವನು ಕಾಯುತ್ತಿದ್ದನು ಮತ್ತು ಇತರರು ಸಾಯಲಿಕ್ಕೆ ಕಾರಣನಾಗಲು ಅವನು ಸಾಕ್ಷಿಕೊಟ್ಟಿದ್ದನು. ಇಷ್ಟಲ್ಲದೇ, ವಿಚಿತ್ರವಾದ ಘಟನೆ ಸಂಭವಿಸಿದಾಗ ಪೌಲನ ಜೊತೆಯಲ್ಲಿ ಯಾವ ಕ್ರೈಸ್ತರೂ ಇರಲಿಲ್ಲ.

**ಉದ್ದೇಶಪೂರ್ವಕವಾದ ಅಸತ್ಯ?**

ಪರಲೋಕದ ದರ್ಶನದ ಕಥೆಯನ್ನು ಪೌಲನು ಕಲ್ಪಿಸಿದನೆಂದು ವಿಚಾರಿಸ ಬಹುದೋ? ಸುಳ್ಳು ಹೇಳುವದರಿಂದ ಪೌಲನು ಏನನ್ನು ಕಳೆದು ಕೊಂಡನೆಂದು ಯೋಚಿ ಸುವಾಗ ಅಂಥ ಊಹೆಯಿಂದ ಹಿಂಜರಿಯುತ್ತಾರೆ: (1) ಅವನ ಪ್ರತೀಕ್ಷೆಗಳು ಮಾಯ

ವಾಗಿ ಹೋದವು. ಕ್ರೈಸ್ತನಾಗುವ ಮೊದಲು ತನ್ನ ಪ್ರಸಿದ್ಧ ಪ್ರೊಫೆಸರ ಗಮಲಿಯೇಲನಿಗೆ ಹೋಲಿಸಲ್ಪಡುವ, ಇಸ್ರಾಯೇಲಿನಲ್ಲಿ ಖ್ಯಾತಿಯುಳ್ಳ ರಬ್ಬಿಯಾಗುವ ಮಾರ್ಗದಲ್ಲಿದ್ದನು. ಕ್ರೈಸ್ತನಾಗುವದರಿಂದ ಈ ಅವಕಾಶವನ್ನು ಅವನು ಕಳೆದುಕೊಂಡನು. (2) ಅವನು ಆಳವಾಗಿ ಪ್ರೀತಿಸಿದ ಕುಟುಂಬದೊಂದಿಗಿನ ಹಾಗೂ ಇಸ್ರಾಯೇಲಿನಲ್ಲಿ ಬಂಧುಗಳ ಅನ್ಯೋನ್ಯತೆಯನ್ನು ಕಡಿದುಕೊಂಡನು (ರೋಮಾಪುರ 9:1-3; ನೋಡಿರಿ 10:1, 2). (3) ಅವನ ಸುಖಕರವಾದ ಜೀವನ ಹೋಯಿತು, ಯಾಕಂದರೆ ಅಂತ್ಯದಲ್ಲಿ ಹತಸಾಕ್ಷಿಯಾಗುವವರೆಗೆ ಹಿಂಸಕನು ಹಿಂಸಿಸಲ್ಪಟ್ಟನು.[1] ಇಲ್ಲ, ದಮಸ್ಕದ ದಾರಿಯ ಘಟನೆಯ ಬಗೆಗಿನ ಸುಳ್ಳು ಒಂದು ಅತೃಪ್ತಿಕರವಾದ ವಿವರಣೆಯಾಗಿದೆ.

### ಕ್ರಿಸ್ತನೊಂದಿಗೆ ಒಂದು ಎದುರ್ಗೊಳ್ಳುವಿಕೆ?

ಮೇಲೆ ಹೇಳಿದವುಗಳನ್ನು ಬಿಟ್ಟು ಇತರ ಪರ್ಯಾಯಗಳಿಗಾಗಿ ಜನರು ಹುಡುಕಿದ್ದಾರೆ, ಆದರೆ ಸಂಭವಿಸಿದ್ದರ ಬಗ್ಗೆ ಪೌಲನು ನಿಶ್ಚಿತವಾದ ಸತ್ಯವನ್ನೇ ಹೇಳಿದ್ದಾನೆ ಎಂಬ ಒಂದೇ ಇತರ ಪರ್ಯಾಯವನ್ನು ಅವರು ಕಂಡುಕೊಳ್ಳುವರು. Sir George Lyttelton (1709-73) ಅವರು ಪೌಲನ ಸಾಕ್ಷಿಯು ಹಾಸ್ಯಕರವಾದ ಕಥೆಯಾಗಿತ್ತೆಂದು ಮೊದಲು ಯೋಚಿಸಿದರು. ಅವನು ಹೀಗೆ ಬರೆದನು,

> [ಅಪೊಸ್ತಲ ಪೌಲನು] ಮೋಸಗೊಳಿಸುವ ಉದ್ದೇಶದಿಂದ ತಾನು ತಿಳಿದದ್ದು ಸುಳ್ಳು ಎಂದು ಹೇಳಿದ ಒಬ್ಬ ಮೋಸಗಾರನಾಗಿದ್ದಿರಬಹುದು; ಇಲ್ಲವೇ ತನ್ನ ಮೇಲೆ ಹೊತ್ತುಕೊಂಡ ಅತೀಯಾದ ಕಲ್ಪನೆಯ ಒತ್ತಡದಿಂದ ತುಂಬಿದ ಮತ ಭ್ರಾಂತನಾಗಿದ್ದನು; ಇಲ್ಲವೇ ಅವನು ಇತರರ ಸುಳ್ಳುಗಳಿಂದ ಮೋಸ ಹೋದವನಾಗಿದ್ದನು, ಹಾಗೂ ಅವನು ಹೇಳಿದ ಎಲ್ಲವನ್ನೂ ಮೋಸದ ಬಲಕ್ಕೆ ಹೊರಿಸಬೇಕು; ಇಲ್ಲವೇ ಅವನ ಮಾರ್ಪಾಟಿಗೆ ಏನು ಕಾರಣವೆಂದು ಅವನು ಘೋಷಿಸಿದನೋ ಮತ್ತು ಅದರ ಪರಿಣಾಮವಾಗಿ ಸಂಭವಿಸಿದ್ದು, ನಿಜವಾಗಿಯೂ ಎಲ್ಲವೂ ಸಂಭವಿಸಿತು; ಮತ್ತು ಆದುದರಿಂದ ಕ್ರೈಸ್ತ ಧರ್ಮವೂ ಒಂದು ದೈವಿಕ ಪ್ರಕಟನೆಯಾಗಿದೆ.[2]

ಪೌಲನ ಜೀವನ ಹಾಗೂ ಮಾತುಗಳನ್ನು ಸಾಧ್ಯವಾದ ಪ್ರತಿಯೊಂದು ವಿಧದಲ್ಲಿ ಪರೀಕ್ಷಿಸಿದ ನಂತರ ಮತ್ತು ಪ್ರತಿಯೊಂದು ವಿವರಣೆಯನ್ನು ತೀರಿಸಿದ ನಂತರ ಲಿಟ್ಟಲಟನ್‌ನು ಪೌಲನು ಹೇಳಿದ್ದು ಸತ್ಯವಾಗಿತ್ತೆಂಬ ನಿರ್ಧಾರಕ್ಕೆ ಬಂದನು.

## ಮುಕ್ತಾಯ

ಭೂಲೋಕಕ್ಕೆ ಬರಲಿಕ್ಕಿದ್ದ ಮೆಸ್ಸೀಯನ ಸಂದರ್ಶನದ ಬಗ್ಗೆ ಅನೇಕ ನಿರ್ದಿಷ್ಟವಾದ ವಿವರಣೆಗಳನ್ನು ತಿಳಿಯಲು ಹಳೇ ಒಡಂಬಡಿಕೆಯ ಪ್ರವಾದಿಗಳಿಗೆ ಅದ್ಭುತಕರವಾದ ಜ್ಞಾನದ ಅವಶ್ಯಕತೆಯಿತ್ತು. ಆತನು ತಲುಪುವದಕ್ಕಿಂತ ನೂರಾರು ವರ್ಷಗಳ ಮೊದಲೇ ಅವರ ಮುಂತಿಳಿಸುವಿಕೆಗಳು ಬರಹದಲ್ಲಿ ಇಡಲ್ಪಟ್ಟಿದ್ದವು.

ಮೆಸ್ಸೀಯನೆಂದು ಹೇಳಿಕೊಂಡ ವ್ಯಕ್ತಿಯು ನಿಜವಾಗಿಯೂ ಆಗಸ್ಟಸ್ ಸೀಜರನ ದಿನಗಳಲ್ಲಿ (ಕ್ರಿ.ಪೂ. 31-ಕ್ರಿ.ಶ. 14) ಯೂದಾಯದ ಬೇತ್ಲೆಹೇಮಿನಲ್ಲಿ ಜನಿಸಿದ್ದನು, ಮತ್ತು ದೇಶಾಧಿಪತಿಯಾದ ಪೊಂತಿ ಪಿಲಾತನ ಆಡಳಿತೆಯ ಸಮಯದಲ್ಲಿ ಸತ್ತು

ಹೋದನೆಂದು ದೃಢಪಡಿಸಲ್ಪಟ್ಟನು.

ಆತನ ಬಾಧ್ಯತೆಗಳಿಗೆ ರುಜುವಾತು ಪತ್ರಗಳಂತೆ ವರದಿಯಾದ ಅದ್ಭುತ ಕಾರ್ಯಗಳಲ್ಲದೇ, ಆತನ ಜೀವಿತದ ಮಾದಿರಿಯು ಆತನ ಸತ್ಯತೆಗೆ ಸಾಕ್ಷಿಕೊಟ್ಟಿತ್ತು. ಆತನು ದೀನತೆಯಿಂದ ಹೊದಿಸಲ್ಪಟ್ಟಿದ್ದನು, ಇತರರಿಗಾಗಿ ಜೀವಿಸುವಲ್ಲಿ ಸ್ವಾರ್ಥರಹಿತನಾಗಿದ್ದನು, ತನ್ನ ತಂದೆಯ ಚಿತ್ತವನ್ನು ಮಾಡುವದನ್ನು ಬಿಟ್ಟ ಯಾವ ವೈಯಕ್ತಿಕ ಮಹದಾಶೆಯನ್ನು ಇಟ್ಟುಕೊಂಡಿರಲಿಲ್ಲ. ಯೇಸು ಮಾತಾಡಿದಂತೆ ಯಾವ ಮನುಷ್ಯನೂ ಮಾತಾಡಲಿಲ್ಲ ಹಾಗೂ ಆತನು ಜೀವಿಸಿದಂತೆ ಯಾವದೇ ಮನುಷ್ಯನು ಜೀವಿಸಿಲ್ಲ ಮತ್ತು ಎಂದೂ ಜೀವಿಸುವದಿಲ್ಲ. ದೈವತ್ವವನ್ನು ಮಾನವ ಜೀವಿಗಳು ಗುರುತಿಸುವಷ್ಟರ ಮಟ್ಟಿಗೆ ಆತನ ಗುಣಲಕ್ಷಣವು ದೇವರಿಂದ ನಿರೀಕ್ಷಿಸುವಂಥದ್ದಷ್ಟಾಗಿ ಕಂಡು ಬರುತ್ತದೆ.

ಕ್ರೂಜಿಸಲ್ಪಟ್ಟ ಕ್ರಿಸ್ತನು ಜೀವಿತನಾಗಿ ಬಂದಿದ್ದಾನೆ ಎಂಬ ನಂಬಿಕೆಯು ಕೆಲವೊಂದು ಅವಿಶ್ವಾಸಿಗಳನ್ನು ಹಿಡಿದು ಕೊಂಡಿತು. ಆತನ ಮೇಲೆ ಮರಣಕ್ಕೆ ಬಲವಿಲ್ಲ ಎಂಬುದನ್ನು ಕಂಡುಕೊಂಡರು. ಈ ದೃಢ ನಂಬಿಕೆಯು ಕೂಡಲೇ ಅವರಿಗೆ ಬಂದಿತು. ಆ ಮಹಿಮೆಯುಳ್ಳ ನಂಬಿಕೆಯ ಪ್ರಸಂಗಿಗಳು ಅವರಾಗುವಂತೆ ಅದು ಆಳವಾದದ್ದೂ ಅರ್ಥಗರ್ಭಿತವಾದದ್ದು ಆಗಿತ್ತು. ಅವರು ಪ್ರಸಂಗಿಸಿದ್ದನ್ನು, ಅವರು ಸುವಾರ್ತೆ - "ಶುಭವಾರ್ತೆ"ಎಂದು ಕರೆದರು. ದೇವರು ಬಂದಿದ್ದಾನೆ ಹಾಗೂ ಜನರ ಮಧ್ಯದಲ್ಲಿ ದೇಹಧಾರಿಯಾಗಿ ಜೀವಿಸಿದನು ಎಂಬ ತಮ್ಮ ನಂಬಿಕೆಯನ್ನು ಸ್ವೀಕರಿಸಲಿಕ್ಕೆ ಸಾವಿರಾರು ಜನರನ್ನು ಅವರು ಪ್ರೋತ್ಸಾಹಿಸಿದರು.

---

ಟಿಪ್ಪಣಿಗಳು

[1]ಓದಿರಿ ಅಪೊಸ್ತಲರ ಕೃತ್ಯ 9:23, 29; 14:19; 16:23; 21:13, 30; 23:13; 2 ತಿಮೊಥೆ 4:7, 8. [2]*Lord Lyttelton on the Conversion of St. Paul and Gilbert West on the Resurrection of Jesus Christ* (New York: American Tract Society, 1929), 468.

© 2009 Truth for Today